**ಬ್ಯಾಟ್ಸ್‌ಮನ್‌ಗಳ ಅಬ್ಬರದ ನಡುವೆಯೂ ಈಗಿನ ಬೌಲರ್‌ಗಳಲ್ಲಿ ಮೊನಚಿಲ್ಲ ಎಂದೇನೂ ಭಾವಿಸಬೇಕಿಲ್ಲ. ಬೂಮ್ರಾ ಐಪಿಎಲ್ ಅವಕಾಶವನ್ನು ಸಾಣೆಯಾಗಿಸಿಕೊಂಡಿದ್ದಾರೆ. ಭುವನೇಶ್ವರ್ ಸ್ವಿಂಗ್‌ಗಳು ಪರೀಕ್ಷೆಗೆ ಒಳಗಾಗುತ್ತಿವೆ. ಯಜುವೇಂದ್ರ ಚಾಹಲ್, ಅಕ್ಷರ್ ಪಟೇಲ್ ಕೂಡ ಮುಂಗೈಗೆ ಕೆಲಸ ಕೊಡುತ್ತಿದ್ದಾರೆ. ಆಸ್ಟ್ರೇಲಿಯಾದ ಜಂಪಾ ಇಲ್ಲಿನ ಸ್ಪಿನ್‌ಸ್ನೇಹಿ ಪಿಚ್‌ಗಳ ರಸಾಸ್ವಾದ ಅನುಭವಿಸುತ್ತಿದ್ದರೆ, ಹಳೆಯ ಸ್ಪಿನ್ ದಿಗ್ಗಜರಾದ ಹರಭಜನ್ ಸಿಂಗ್, ಅಮಿತ್ ಮಿಶ್ರ ಕೂಡ 'ಇನ್ನೂ ನಮ್ಮಲ್ಲಿ ಕಸುವಿದೆ' ಎಂದು ಪದೇ ಪದೇ ನಗುತ್ತಿದ್ದಾರೆ. ವಿಂಡೀಸ್‌ನ ಬ್ರಾವೋ ಚೆಂಡಿನ ವೇಗವೈವಿಧ್ಯದಿಂದ ಈಗಲೂ ಕಾಡಬಲ್ಲರು.**



ವೀರೇಂದ್ರ ಸೆಹ್ವಾಗ್ (ಇವರ ಸ್ಟ್ರೈಕ್ ರೇಟ್ 155.44) ಎಲ್ಲರದ್ದೂ ಅಸಾಂಪ್ರದಾಯಿಕ ಶೈಲಿಯೇ.

ಐಪಿಎಲ್ ಬ್ಯಾಟ್ಸ್‌ಮನ್‌ಗಳ ಹಾವು–ಏಣಿ ಆಟ ಹೇಗಿರುತ್ತದೆನ್ನುವುದಕ್ಕೆ ಈ ಅಂಕಿಅಂಶಗಳ ಸೂಕ್ಷ್ಮ ಅವಲೋಕನವೇ ಉತ್ತರ ಕೊಟ್ಟೀತು. ಆದರೆ, ಬೌಲರ್‌ಗಳ ಅಂಕಿಅಂಶ ಹೇಳುವ ಸತ್ಯಗಳೇ ಬೇರೆ. ಮಲಿಂಗ ಇದುವರೆಗಿನ ಐಪಿಎಲ್ ಪಂದ್ಯಗಳೆಲ್ಲದರಿಂದ 154 ವಿಕೆಟ್‌ಗಳನ್ನು (ಮಾರ್ಚ್ 28ರವರೆಗೆ) ಪಡೆದುಕೊಂಡಿದ್ದಾರೆ. ಅಮಿತ್ ಮಿಶ್ರ (148), ಪಿಯೂಷ್ ಚಾವ್ಲಾ (142), ಡ್ವೇನ್ ಬ್ರಾವೊ (140), ಹರಭಜನ್ ಸಿಂಗ್ (137) ನಂತರದ ಸ್ಥಾನದಲ್ಲಿದ್ದಾರೆ. ಇವರೆಲ್ಲರೂ ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಅನುಭವ ಪಡೆದುಕೊಂಡು ಬಂದಮೇಲೆ ಐಪಿಎಲ್‌ನಲ್ಲೂ ಗಮನ ಸೆಳೆಯುತ್ತಿರುವವರು. 2008ರಲ್ಲಿ ರಾಜಸ್ಥಾನ ರಾಯಲ್ಸ್ ಪ್ರತಿನಿಧಿಸಿದ ಸೊಹೇಲ್ ತನ್ವೀರ್ 'ಚೆನ್ನೈ ಸೂಪರ್‌ಕಿಂಗ್ಸ್' ಎದುರಿನ ಒಂದು ಪಂದ್ಯದಲ್ಲಿ 4 ಓವರ್‌ಗಳಲ್ಲಿ 14 ರನ್ ಕೊಟ್ಟು 6 ವಿಕೆಟ್ ಪಡೆದಿದ್ದರು. ಪಾಕಿಸ್ತಾನದ ಆ ಆಟಗಾರನ ಈ 'ಬೆಸ್ಟ್ ಬೌಲಿಂಗ್ ಇನ್ ಆ್ಯನ್ ಇನಿಂಗ್ಸ್' ಎಂಬ ಸಾಧನೆಯನ್ನು ದಶಕ ಕಳೆದರೂ ಅಳಿಸಲು ಬೇರೆ ಯಾರಿಗೂ ಆಗಿಲ್ಲ. ಆಸ್ಟ್ರೇಲಿಯಾದ ಆ್ಯಡಂ ಜಂಪಾ ಕೂಡ 2016ರ ಪಂದ್ಯವೊಂದರಲ್ಲಿ 6 ವಿಕೆಟ್ ಪಡೆದರಾದರೂ ಅವರು ಸೊಹೇಲ್‌ಗಿಂತ ಇನ್ನೂ ನಾಲ್ಕು ರನ್ ಹೆಚ್ಚಿಗೆ ಕೊಟ್ಟರು. ಪಂದ್ಯವೊಂದರ ಬೆಸ್ಟ್ ಬೌಲಿಂಗ್ ಯಾದಿಯಲ್ಲಿ ಮೂರನೇ ಸ್ಥಾನದಲ್ಲಿರುವ ಅನಿಲ್ ಕುಂಬ್ಳೆ (3.1 ಓವರ್‌ಗಳಲ್ಲಿ 5 ರನ್ ನೀಡಿ 5 ವಿಕೆಟ್) ರಾಯಲ್ ಚಾಲೆಂಜರ್ಸ್, ಬೆಂಗಳೂರಿಗೆ



'ಮುಂಬೈ ಇಂಡಿಯನ್ಸ್' ಆಟಗಾರ ಯುವರಾಜ್ ಸಿಂಗ್ ತಮ್ಮಲ್ಲಿನ್ನೂ ಆಟ ಬಾಕಿಯಿದೆ ಎನ್ನುವಂತೆ ಆಡುತ್ತಿದ್ದಾರೆ